## ಪ್ರಧಾನ ಸಿವಿಲ್  ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

## ಸಿ ಸಿ  ನಂ. 414/2023

| | | |
|---|---|---|
| ಹೆಸರು | ಆಶಾ | PW –01 |
| ಗಂಡನ  ಹೆಸರು | ರೇವಣಸಿದ್ದಪ್ಪ | CW –01 |
| ವಯಸ್ಸು | 34 ವರ್ಷ | |
| ಉದ್ಯೋಗ | ಗೃಹಿಣಿ | ದಿನಾಂಕಃ 28.11.2024 |
| ವಾಸ | ಹನಗವಾಡಿ ಗ್ರಾಮ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ. 2 ಮತ್ತು 3 ರವರ ಪರಿಚಯವಿದೆ. ಚಾಸಾ.4 ನನ್ನ ಗಂಡ. ಚಾಸಾ.5 ಮತ್ತು 6 ರವರ ಪರಿಚಯವಿದೆ.

ದಿನಾಂಕ 01-03-2023 ರಂದು ಮಧ್ಯಾಹ್ನ 12.30 ಗಂಟೆ ಸುಮಾರಿಗೆ ನಾನು ಮತ್ತು ನನ್ನ ಗಂಡ ದಾವಣಗೆರೆಯಲ್ಲಿ ಕೆಲಸ ಮುಗಿಸಿಕೊಂಡು, ವಾಪಸ್ಸ ಬೈಕನಲ್ಲಿ ಬರುತ್ತಿರುವಾಗ, ಹರಿಹರ ಶಿವಮೊಗ್ಗ ರಸ್ತೆಯ ಬೈಪಾಸನ ಮುಂದೆ ಹೋಗುತ್ತಿರುವಾಗ, ಆರೋಪಿ ಏಕಾ ಏಕಿ ಬಂದು ನಮ್ಮ ಬೈಕ್ ನ್ನು ತಡೆದು ನಿಲ್ಲಿಸಿ, ನನ್ನ ಗಂಡನಿಗೆ ಲೋಫರ್ ಸೂಳೆಮಗನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ನನ್ನ ಗಂಡ ಏಕೆ ಬೈಯುತ್ತಿಯಾ ಎಂದು ಕೇಳಿದಾಗ, ನನ್ನ ಗಂಡನ ಕತ್ತನ್ನು ಹಿಡಿದು ದೂಡಾಡಿ, ನಂತರ ಜೀವ ಬೆದರಿಕೆ ಹಾಕಿರುತ್ತಾರೆ.  ನನ್ನ ಗಂಡನನ್ನು ಜಗಳದಿಂದ ಬಿಡಿಸಲು ಹೋದಾಗ ನನ್ನ ಬಟ್ಟೆಯನ್ನು ಹಿಡಿದು ಎಳೆದಾಡಿ, ನನ್ನನ್ನೂ ದೂಡಾಡಿದರು.  ನಂತರ ಅಲ್ಲಿಯೇ ಇದ್ದ ರಮೇಶ್ ಮತ್ತು ರುದ್ರೇಶ್ ಗೌಡ ರವರು ಬಂದು ಜಗಳವನ್ನು ಬಿಡಿಸಿದರು.

ಸದರಿ ಗಲಾಟೆಗೆ ಕಾರಣವಾದ ವಿಷಯ ಏನೆಂದರೆ, ನಮಗೆ ಸೇರಿದ ಒಂದು ಟಾಟಾ ಮ್ಯಾಜಿಕ್ ಎಕ್ಸಪ್ರೆಸ್ ವಾಹನ ಇತ್ತು. ಸದರಿ ವಾಹನವನ್ನು ನನ್ನ ಗಂಡ ಶಾಲೆಯ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಲು ಮತ್ತು ಬರಲು ಉಪಯೋಗಿಸುತ್ತಿದ್ದರು. ಆದರೆ ಅದರಿಂದ ನಮಗೆ ನಷ್ಟವಾಗುತ್ತಿದ್ದರಿಂದ ನನ್ನ ಗಂಡ ಸದರಿ ವಾಹನವನ್ನು ಮಾರಾಟ ಮಾಡಲು ಯೋಚಿಸಿದ್ದರು. ಆಗ ನಮಗೆ ಆರೋಪಿತನ ಪರಿಚಯವಾಗಿರುತ್ತದೆ. ಸದರಿ ಆರೋಪಿತನು ವಾಹನ ಮಾರಾಟಕ್ಕಾಗಿ ಗ್ರಾಹಕರನ್ನು ಕರೆದುಕೊಂಡು ಬರುತ್ತಿದ್ದನು. ಆಗ ಆರೋಪಿ ನಮ್ಮ ಮನೆಗೆ ಬಂದು ಹೋಗಿ ಮಾಡುತ್ತಿದ್ದರು. ಈ ವಿಚಾರ ಆರೋಪಿಯ ಮನೆಯವರಿಗೆ ಇಷ್ಟವಾಗುತ್ತಿರಲಿಲ್ಲ. ಆಗ ಆರೋಪಿಯ ಮನೆಯವರು ನನ್ನ ಗಂಡನಿಗೆ ಬಂದು, ಆರೋಪಿಯು ನಿಮ್ಮ ಮನೆಗೆ ಬರುವುದು ನಮಗೆ ಇಷ್ಟವಿಲ್ಲ ಎಂದು ತಿಳಿಸಿದರು. ನಂತರ ನನ್ನ ಗಂಡ ಆರೋಪಿಗೆ  ನೀನು ನಮ್ಮ ಮನೆಗೆ ಬರುವುದು, "ನಿಮ್ಮ ಮನೆಯವರಿಗೆ ಇಷ್ಟವಿಲ್ಲ ಆದ್ದರಿಂದ ಬರಬೇಡ" ಎಂದು ಹೇಳಿದರು. ಆಗ ಆರೋಪಿ ನಮ್ಮ ಮನೆಗೆ ಬರದೆ ಇರಲು ಆಗುವುದಿಲ್ಲ ಎನ್ನುವ ರೀತಿಯಲ್ಲಿ ವರ್ತಿಸುತ್ತಿದ್ದ.  ಸದರಿ ವಿಚಾರಕ್ಕಾಗಿ ಆರೋಪಿಗೆ ಮತ್ತು  ನನ್ನ ಗಂಡನ ಮಧ್ಯ ಆಗಾಗ ಗಲಾಟೆ ಆಗುತ್ತಿತ್ತು. ಆರೋಪಿಯು ಸಾಕಷ್ಟು ಬಾರಿ ನನ್ನ ಗಂಡನ ಜೊತೆ ಜಗಳ ಮಾಡಿರುತ್ತಾರೆ. ಸದರಿ ವಿಚಾರವನ್ನು ಆರೋಪಿಯ ತಂದೆಗೆ ಫೋನ್ ಮಾಡಿ ತಿಳಿಸಿದರು. ಆಗ ಆರೋಪಿಯ ತಂದೆ ಸದರಿ ವಿಚಾರದ ಬಗ್ಗೆ ನಮ್ಮ ಮನೆಗೆ ಬಂದು ಬಗೆಹರಿಸೋಣ ಎಂದು ಹೇಳಿದ್ದು,  ನನ್ನ ಗಂಡ ಮತ್ತು ನನ್ನ ಅಮ್ಮ ಆರೋಪಿಯ ಮನೆಗೆ ಹೋದಾಗ, ಅಲ್ಲಿ

ಆರೋಪಿಯ ಇಬ್ಬರು ಅಣ್ಣಂದಿರಾದ ಪವನ ಮತ್ತು ಪುನಿತ್ ಮತ್ತು ಆರೋಪಿ ಎಲ್ಲರೂ ಸೇರಿ ನನ್ನ ಗಂಡನನ್ನು ಹೊಡೆದು, ಎದೆಗೆ ಗುದ್ದಿದರು. ನಂತರ ಸದರಿ ಜಗಳವನ್ನು ನನ್ನ ತಾಯಿ ಬಿಡಿಸಿಕೊಂಡು ನನ್ನ ಗಂಡನನ್ನು ಮನೆಗೆ ಕರೆದುಕೊಂಡು ಬಂದರು. ನಂತರ ನನ್ನ ಗಂಡನನ್ನು ಹರಿಹರ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋದಾಗ, ಅವರು ದಾವಣಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿರುತ್ತಾರೆ. ನಂತರ ಸದರಿ ಗಲಾಟೆ ವಿಚಾರವಾಗಿ ನಾವು ಹರಿಹರ ಗ್ರಾಮಾಂತ ಪೋಲಿಸ್ ಠಾಣೆಗೆ ದೂರನ್ನು ಸಲ್ಲಿಸಿದ್ದೇವು. ಆಗ ಪೋಲಿಸರು ಆರೋಪಿ ಮತ್ತು ನಮ್ಮ ನಡುವೆ ರಾಜಿ ಪಂಚಾಯ್ತಿ ಮಾಡಿದರು. ನಂತರ ಪ್ರಸ್ತುತ ಪ್ರಕರಣದಲ್ಲಿರುವ ಗಲಾಟೆ ಆಗಿರುತ್ತದೆ. ನಂತರ ಸದರಿ ಗಲಾಟೆಯ ಬಗ್ಗೆ ನಾವು ಪೋಲಿಸ್ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇವೆ . ಸದರಿ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ದೂರನ್ನು ಸಲ್ಲಿಸಿದ ದಿನದಂದೆ ಸಂಜೆ 4.00 ಗಂಟೆ ಸುಮಾರಿಗೆ ಪೋಲಿಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ ನಾನು, ನನ್ನ ಗಂಡ, ಚಾಸಾ.2 ಮತ್ತು 3 ರವರು ಹಾಜರಿದ್ದರು. ಪಂಚನಾಮೆ ಕಾಲಕ್ಕೆ ಪೋಲಿಸರಿಗೆ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಸಂಜೆ 4.00 ರಿಂದ 5.00 ಗಂಟೆಯವರೆಗೆ ಜರುಗಿಸಲಾಯಿತು. ಸದರಿ ಪಂಚನಾಮೆಯನ್ನು ನಿಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು 2(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಕಾಲಕ್ಕೆ ಒಂದು ಪೋಟೊವನ್ನು ತೆಗೆದಿದ್ದು, ಸಾಕ್ಷಿಯು ಸದರಿ ಪೋಟೊದಲ್ಲಿ ತಾನು ಇರುವುದನ್ನು ಗುರುತಿಸಿದ್ದು, ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ( ಆರೋಪಿ ಪರ ವಕೀಲರು ನಿಪಿ.3 ರನ್ನು ತಕರಾರಿಗೆ ಒಳಪಟ್ಟು ಗುರುತಿಸಲು ಹೇಳಿದ್ದರಿಂದ ನಿಪಿ.3 ರನ್ನು ತಕರಾರಿಗೆ ಒಳಪಟ್ಟು ಗುರುತಿಸಲಾಯಿತು) ನಂತರ ನಾನು ನ್ಯಾಯಾಲಯಕ್ಕೆ ಬಂದು, ನ್ಯಾಯಾಧೀಶರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. (ಮುಚ್ಚಿದ ಲಕೋಟೆಯನ್ನು ತೆರೆಯಲು ಮಾನ್ಯ ನ್ಯಾಯಾಲಯಕ್ಕೆ ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.) ಸದರಿ ಲಕೋಟೆಯನ್ನು ತೆಗೆದು ಸಾಕ್ಷಿಗೆ 164 ಹೇಳಿಕೆಯನ್ನು ತೋರಿಸಲಾಯಿತು. ಸಾಕ್ಷಿಯು 164 ಕಲಂ ಹೇಳಿಕೆಯನ್ನು ತನ್ನ ಸಹಿ ನೋಡಿ ಗುರುತಿಸಿದ್ದು, 164 ಹೇಳಿಕೆಯನ್ನು ನಿಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

(ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಸಾಕ್ಷಿಯ ಪಾಟೀ ಸವಾಲಿಗೆ ರೂ. 500/-ಖರ್ಚಿನೊಂದಿಗೆ ಮಂಜೂರು ಮಾಡಲಾಯಿತು)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.